22. ಗುಲ್ಬರ್ಗಾ		
ನಗರ ಪಾಲಿಕೆ	:	ಗುಲ್ಬರ್ಗಾ
ಪುರಸಭೆ	:	ಶಹಾಪುರ, ಶೋರಾಪುರ, ಚಿಂಚೋಳಿ, ಆಳಂದ, ಯಾದಗಿರಿ, ಚಿತ್ತಾಪುರ, ಶಹಾಬಾದ್, ಸೇಡಂ.
ಪಟ್ಟಣಪಂಚಾಯತಿ	:	ಜೇವರಗಿ, ಗುರ್‌ಮಿಟ್‌ಕಲ್
23. ರಾಯಚೂರು		
ನಗರಸಭೆ	:	ರಾಯಚೂರು,
ಪುರಸಭೆ	:	ಮಾನ್ವಿ, ಸಿಂಧನೂರು, ಲಿಂಗಸಗೂರು.
24. ಬೀದರ್		
ನಗರಸಭೆ	:	ಬೀದರ್
ಪುರಸಭೆ	:	ಭಾಲ್ಕಿ, ಚಿಟಗುಪ್ಪ, ಹುಮ್ನಾಬಾದ್, ಬಸವಕಲ್ಯಾಣ, ಹೊಸಪೇಟೆ.
ಪಟ್ಟಣಪಂಚಾಯತಿ	:	ಕೊಟ್ಟೂರು.
25. ಬಳ್ಳಾರಿ		
ನಗರಸಭೆ	:	ಬಳ್ಳಾರಿ
ಪುರಸಭೆ	:	ಸಿರಗುಪ್ಪ,
ಪಟ್ಟಣಪಂಚಾಯತಿ	:	ಕಮಲಾಪುರ, ತೆಕ್ಕಲಕೋಟೆ, ಹೂನಿನಹಡಗಲಿ, ಸಂಡೂರು
26. ಕೊಪ್ಪಳ		
ನಗರಸಭೆ	:	ಕೊಪ್ಪಳ, ಗಂಗಾವತಿ

245 (874) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಪೌರಾಡಳಿತ ಹಾಗೂ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ Priliminary ನೋಟಿಫಿಕೇಷನ್‌ನಂತೆ, ಯಾವ ಯಾವ ಗ್ರಾಮದಲ್ಲಿ ಎಷ್ಟೆಷ್ಟು ಎಕರೆ ಜಮೀನು ವಶಪಡಿಸಿಕೊಳ್ಳಲಾಗಿದೆ. (ಗ್ರಾಮವಾರು ವಿವರ ಒದಗಿಸುವುದು)

ಆ) ಅಂತಿಮವಾಗಿ ಎಷ್ಟು ವಿಸ್ತೀರ್ಣದ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ;

ಇ) ಡೀ ನೋಟಿಫಿಕೇಷನ್ ಮಾಡಿರುವ ಭೂಮಿಯ ವಿಸ್ತೀರ್ಣ ಎಷ್ಟು (ವಿವರ ನೀಡುವುದು)?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಅರ್ಕಾವತಿ ಬಡಾವಣೆಗಾಗಿ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಬಿಡಿಎ:ಕಮೀಷನರ್:ಎಎಲ್‌ಎಒ:9:104:2002-03, ದಿನಾಂಕ: 3-2-2003ರಲ್ಲಿ 3,839 ಎಕರೆ 12 ಗುಂಟೆ ಜಮೀನಿಗೆ ಅಧಿಸೂಚನೆ ಹೊರಡಿಸಲಾಗಿದೆ. ವಿವರ ಕೆಳಕಂಡಂತೆ ಇರುತ್ತದೆ:

	ಎ – ಗುಂ
1. ದಾಸರಹಳ್ಳಿ	380–04
2. ಅಮೃತಹಳ್ಳಿ	195–11
3. ಶ್ರೀರಾಂಪುರ	196–35
4. ಕೆಂಪಾಪುರ	55–13
5. ಜಕ್ಕೂರು	422–28
6. ವೆಂಕಟೇಶಪುರ	95–05
7. ಭೈರತಿಖಾನೆ	86–07
8. ಚಳ್ಳಕೆರೆ	155–03
9. ಗೆದ್ದಲಹಳ್ಳಿ	210–22
10. ರಾಜೇನಹಳ್ಳಿ	396–29
11. ಕೆ. ನಾರಾಯಣಪುರ	195–13
12. ಥಣಿಸಂದ್ರ	557–04
13. ಹೆನ್ನೂರು	262–22
14. ನಾಗಾವರ	169–16
15. ಸಂಪಿಗೆಹಳ್ಳಿ	401–39
16. ಹೆಬ್ಬಾಳ	59–01

ಆ) ಸರ್ಕಾರವು 2,750 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಸಂಖ್ಯೆ:ಯುಡಿಡಿ 193 ಎಂಎನ್ಎಕ್ಸ್ 2004 ದಿನಾಂಕ: 21.2.2004ನ್ನು ಹೊರಡಿಸಿದೆ. ವಿವರ ಕೆಳಕಂಡಂತೆ ಇರುತ್ತದೆ:

	ಎ – ಗುಂ
1. ದಾಸರಹಳ್ಳಿ	225–18
2. ಅಮೃತಹಳ್ಳಿ	139–01
3. ಶ್ರೀರಾಂಪುರ	94–13
4. ಕೆಂಪಾಪುರ	26–38
5. ಜಕ್ಕೂರು	360–24
6. ವೆಂಕಟೇಶಪುರ	60–13
7. ಭೈರತಿಖಾನೆ	77–25
8. ಚಳ್ಳಕೆರೆ	135–14
9. ಗೆದ್ದಲಹಳ್ಳಿ	133–24
10. ರಾಜೇನಹಳ್ಳಿ	298–03
11. ಕೆ. ನಾರಾಯಣಪುರ	133–05

12.	ಥಣಿಸಂದ್ರ	482–07
13.	ಹೆನ್ನೂರು	140–21
14.	ನಾಗಾವರ	127–00
15.	ಸಂಪಿಗೆಹಳ್ಳಿ	256–20
16.	ಹೆಬ್ಬಾಳ	59–14

ಇ) ಅಂತಿಮ ಅಧಿಸೂಚನೆಯಲ್ಲಿ ಸೇರಿರುವ ಯಾವುದೇ ಜಮೀನನ್ನು ಡೀ ನೋಟಿಫಿಕೇಷನ್ ಮಾಡಿರುವುದಿಲ್ಲ.

246 (258) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೀರಪ್ಪನ್ ಕಾರ್ಯಾಚರಣೆಗೆ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ಮಾಡಿದ್ದ ಖರ್ಚು ಎಷ್ಟು?

ಆ) ವೀರಪ್ಪನ್ ಪತ್ತೆಗೆ ಸರ್ಕಾರಿ ಬಹುಮಾನ ಘೋಷಿಸಿತ್ತೆ; ಆ ಬಹುಮಾನ ಮೊತ್ತ ಎಷ್ಟು?

ಇ) ವೀರಪ್ಪನ್ ಹತ್ಯೆ ನಂತರ ಕರ್ನಾಟಕ ಸರ್ಕಾರ ಎಸ್.ಟಿ.ಎಫ್. ಸಿಬ್ಬಂದಿಗೆ ಘೋಷಿಸಿರುವ ಬಹುಮಾನವೆಷ್ಟು?

ಈ) ಇದಕ್ಕೂ ಮೊದಲು ಈ ಸಿಬ್ಬಂದಿಗಳಿಗೆ ನೀಡಬೇಕಾಗಿದ್ದ (ಬಾಕಿ) ಬಹುಮಾನ ಹಣವೆಷ್ಟು; ಇದನ್ನು ಬಾಕಿ ಉಳಿಸಿಕೊಳ್ಳಲು ಕಾರಣಗಳೇನು? (ವಿವರ ನೀಡುವುದು)

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವೀರಪ್ಪನ್ ಕಾರ್ಯಾಚರಣೆಗೆ ತಮಿಳುನಾಡು ಸರ್ಕಾರ ಮಾಡಿದ ವೆಚ್ಚದ ಬಗ್ಗೆ ಮಾಹಿತಿ ಲಭ್ಯವಿಲ್ಲ. ಕರ್ನಾಟಕ ಸರ್ಕಾರ ಈ ಕಾರ್ಯಾಚರಣೆಗಾಗಿ ಡಿಸೆಂಬರ್ 2004 ರವರೆಗೆ ಒಟ್ಟು ರೂ. 37,81,01,748/– ಗಳಷ್ಟು ವೆಚ್ಚ ಮಾಡಿದೆ.

ಆ) ವೀರಪ್ಪನ್ ಪತ್ತೆ ಮತ್ತು ಹತ್ಯೆಗೆ ಕರ್ನಾಟಕ ಸರ್ಕಾರ ರೂ. 5 ಕೋಟಿ ಮೊತ್ತದ ಬಹುಮಾನವನ್ನು ಘೋಷಿಸಿದೆ.

ಇ) ವೀರಪ್ಪನ್ ಹತ್ಯೆಯ ನಂತರ ಎಸ್.ಟಿ.ಎಫ್. ಸಿಬ್ಬಂದಿಗೆ ಸೂಕ್ತ ಬಹುಮಾನ ನೀಡುವ ಬಗ್ಗೆ ಮತ್ತು ಬಹುಮಾನದ ಮೊತ್ತದ ನಿರ್ಧರಣೆಯ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಈ) ಎಸ್.ಟಿ.ಎಫ್. ಕಾರ್ಯಪಡೆಯ ಮನೋಸ್ಥೈರ್ಯವನ್ನು ಹೆಚ್ಚಿಸಲು 1996 ರಲ್ಲಿ ರೂ. 50 ಲಕ್ಷಗಳನ್ನು ಬಿಡುಗಡೆ ಮಾಡಿ ಆಗಿನ ಸಿಬ್ಬಂದಿಗೆ ವಿತರಿಸಲಾಗಿದೆ.

247 (268) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ಅಚ್ಚುಕಟ್ಟು ಪ್ರದೇಶದ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಬಿರುಕು ಕಂಡು ಬಂದಿದೆಯೇ;